ಅ) ಹೊಳೆನರಸೀಪುರ ತಾಲ್ಲೂಕಿನಲ್ಲಿ ರಾಸುಗಳು ಖಾಯಿಲೆಯಿಂದ ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ರಾಸುಗಳು ಖಾಯಿಲೆಯಿಂದ ಸತ್ತುಹೋಗಿದೆ.

ಇ) ಈ ಸಾಂಕ್ರಾಮಿಕ ಖಾಯಿಲೆಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ರಾಸುಗಳನ್ನು ಕಳೆದುಕೊಂಡ ರೈತರಿಗೆ ಸರ್ಕಾರ ಪರಿಹಾರ ನೀಡಿದೆಯೇ?

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು

ಆ) 18

ಇ) ರೋಗದ ವಿರುದ್ಧ 1290 ರಾಸುಗಳಿಗೆ ಲಸಿಕೆಯನ್ನು ಹಾಕಲಾಗಿದೆ.

ಈ) ಇಲ್ಲಾ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಂಪಣಿ ಪಂಥಿನವರಿಗೆ ಸರ್ಕಾರದ ಸಹಾಯ

541 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಹಿಂದೆ ಮೀನುಗಾರಿಕೆಯ ಮುಖ್ಯ ರಂಪಣಿ ಫಂಡುಗಳಲ್ಲಿ ಈಗ ಎಷ್ಟು ಆಸ್ತಿತ್ವದಲ್ಲಿದೆ.

ಆ) ರಂಪಣಿ ಫಂಡಿನವರಿಗೆ ಸರ್ಕಾರ ಸಹಾಯ ಯಾವ ರೀತಿಯಲ್ಲಿ ಒದಗಿಸುತ್ತದೆ.

ಇ) ಯಾಂತ್ರೀಕೃತ ಮೀನುಗಾರಿಕೆಗೆ ಬೇಕಾದ ಸಹಾಯಧನ ಒದಗಿಸುತ್ತಿರುವಾಗ, ಈ ರಂಪಣಿ ಮೀನುಗಾರಿಕಾ ಫಂಡಿಗೆ ಸಹಾಯ ಒದಗಿಸದಿರಲು ಕಾರಣವೇನು?

ಈ) ಇದನ್ನು ಉಳಿಸುವಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುವುದು.

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಒಂದು ರಂಪಣಿ ಫಂಡು

ಆ) ರಂಪಣಿ ಫಂಡಿನವರಿಗೆ ಸರ್ಕಾರದ ವತಿಯಿಂದ ಸಹಾಯ ಒದಗಿಸಲು ಪ್ರಸ್ತುತ ಯಾವ ಯೋಜನೆಯು ಅಸ್ತಿತ್ವದಲ್ಲಿರುವುದಿಲ್ಲ.

ಇ) ರಂಪಣಿ ಮೀನುಗಾರಿಕೆಯು ನಶಿಸಿಹೋಗಿ ಇಂದಿನ ಆಧುನಿಕ ಯಾಂತ್ರೀಕೃತ ಮೀನುಗಾರಿಕೆಗಿಂತ ಜನಪ್ರಿಯತೆ ಹಾಗೂ ಲಾಭದಾಯಕವಾಗಿಲ್ಲದಿರುವುದು ಕಾರಣ.

ಈ) ಇದನ್ನು ಉಳಿಸಿಕೊಳ್ಳುವ ಅವಶ್ಯಕತೆಯಿರುವುದಿಲ್ಲ.

ಶ್ರೀಕ್ಷೇತ್ರ ಸೋಗಲದಲ್ಲಿ ರಾಷ್ಟ್ರೀಯ ನಂದನವನ

514 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶ್ರೀ ಕ್ಷೇತ್ರ ಸೋಗಲದಲ್ಲಿ ರಾಷ್ಟ್ರೀಯ ನಂದನವನ್ನು ಕೈಗೊಳ್ಳಬೇಕೆಂದು ಅಂದಾಜು ಸಮಿತಿಯವರು ಶಿಫಾರಸ್ಸು ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರದವರು ಅಂದಾಜು ಸಮಿತಿಯ ಶಿಫಾರಸ್ಸಿನ ಪ್ರಕಾರ ರಾಷ್ಟ್ರೀಯ ನಂದನವನ ಕೈಗೊಳ್ಳಲು ಯಾವ ಕ್ರಮ ಕೈಗೊಂಡಿರುವರು?